ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ ಸಿ 2366-2023

ಸಿ.ಡಬ್ಲ್ಯೂ -4
ಪಿ.ಡಬ್ಲ್ಯೂ -4

**ಸಾಕ್ಷಿಗೆ ದಿಃ 16.02.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ.G.N ವಕೀಲರಿಂದಃ**

ನಾನು ಮನೆ ಕೆಲಸ ಮಾಡುತ್ತೇನೆ. ಚಾಸಾ 1 ಅವರು ನನಗೆ ಹಳೆಯ ಸಂಬಂಧಿ ಆಗಬೇಕು. ಚಾಸಾ 1 ಅವರಿಗೆ ವಯಸ್ಸಾಗಿರುವುದರಿಂದ ಯಾವುದೇ ಕೆಲಸಕ್ಕೆ ಹೋಗುವುದಿಲ್ಲವೆಂದರೆ ಸಾಕ್ಷಿ ಮನೆಯಲ್ಲಿದ್ದು ಮನೆ ಕೆಲಸ ಮಾಡಿಕೊಂಡು ಇರುತ್ತಾರೆಂದು ಹೇಳುತ್ತಾರೆ. ಪಂಚನಾಮೆಗೂ ಮೊದಲು ನನಗೆ ಪೋಲಸಿರು ನೋಟಿಸ್ ನೀಡಿದ್ದರು. ನಮ್ಮ ಮನೆಯ ಬಳಿ ಬಂದು ದಿಃ 23.06.2023 ರಂದು ನೀಡಿರುತ್ತಾರೆ. ಯಾವ ವಾರವೆಂದು ನನಗೆ ನೆನಪಿರುವುದಿಲ್ಲ. ನೋಟಿಸನ್ನು 2.30 ರಿಂದ 3 ಗಂಟೆಯ ಸಮಯದಲ್ಲಿ ನೀಡಿರುತ್ತಾರೆ.

ಪಂಚನಾಮೆಯನ್ನು ಜಮೀನಿನ ಬಳಿ ಬರೆದಿರುತ್ತಾರೆ. ಅದರಲ್ಲಿ ಬರೆದ ವಿಚಾರಗಳನ್ನು ನಾನು ಓದಿರುತ್ತೇನೆ. ಪಂಚನಾಮೆಯಲ್ಲಿ ಗಲಾಟೆ ಆದ ದಿನಾಂಕವನ್ನು ಬರೆದಿದ್ದು ಯಾವ ದಿನಾಂಕವೆಂದು ನನಗೆ ಈಗ ಮರೆತು ಹೋಗಿರುತ್ತದೆ. ಕೆಲವೊಂದು ನೆನಪಿರುತ್ತದೆ ಕೆಲವೊಂದು ನನಪಿರುವುದಿಲ್ಲ. ಪಂಚನಾಮೆ ಮಾಡಿದ ಜಮೀನು ತೆಕ್ಕಲು ಇತ್ತು. ಪೂರ್ವಕ್ಕೆ ನಮ್ಮ ಜಮೀನು ಇರುತ್ತದೆ. ಪಂಚನಾಮೆಯಲ್ಲಿ ಬರೆದ ಜಮೀನಿನ ಚಕ್ಕುಬಂದಿ ಪಶ್ಚಿಮಕ್ಕೆ ಚಿಕ್ಕಮ್ಮಾ ಅವರ ಜಮೀನು ಉತ್ತರಕ್ಕೆ ನಾಗರಾಜು ಅವರು ಜಮೀನು ದಕ್ಷಿಣಕ್ಕೆ ಪುಟ್ಟಸಾಮಣ್ಣ ಅಥವಾ ಬೇರೆ ಯಾರದೋ ಇರುತ್ತದೆಂದು ಹೇಳುತ್ತಾರೆ.

ಪಂಚನಾಮೆ ಸಮಯದಲ್ಲಿ ಚಾಸಾ 1, 2, 5 ಮತ್ತು ಪೋಲಿಸರು ಇದ್ದರು. ನಾನು ಮನೆ ಕೆಲಸ ಮಾಡುತ್ತೇನೆ. ನನಗೆ ಇದ್ದರೂ ಮಕ್ಕಳು ಇರುತ್ತಾರೆ. ನನ್ನ ಮಗಳ ಮದುವೆ ಮಾಡಿರುತ್ತೇನೆ ನನ್ನ ಮಗ ಚಿಕ್ಕವನಿರುತ್ತಾನೆ. ಬೆಳಿಗ್ಗೆ 7.30 ಗಂಟೆಗೆ ಶಾಲೆಗೆ

ಹೋಗುತ್ತಾನೆ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಪೋಲಿಸರು ಸ್ಥಳಕ್ಕೆ ಬಂದಿರುವುದಿಲ್ಲವೆಂದರೆ ಸರಿಯಲ್ಲ. ನಾನು ಹೇಳುವ ಚಕ್ಕುಬಂದಿಯ ಜಾಗ ಅಸ್ತಿತ್ವದಲ್ಲಿರುವುದಿಲ್ಲವೆಂದರೆ ಸರಿಯಲ್ಲ. ಚಾಸಾ 1 ಅವರ ಅಣ್ಣನ ಮಗ ಮನು ಅವರ ಮಾತು ಕಲೇಳಿ ಸುಳ್ಳು ದೂರನ್ನು ನೀಡಿದ್ದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲಲ. ನಾನು ಹೇಳಿದಂತೆ ಪೊಲಿಸರು ಸ್ಥಳಕ್ಕೆ ಬಂದಿಲ್ಲ ಯಾವುದೇ ಮಹಜರ ಮಾಡಿಲ್ಲ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲವೆಂದರೆ ಸರಿಯಲ್ಲ.

ಮು. ಮಾ ಗಳ ಮೇಲೆ ನನ್ನ ಸಹಿ ಪಡೆದಿರುವುದಿಲ್ಲ. ದೊಣ್ಣೆಯನ್ನು ಚಾಸಾ 1 ಅವರು ಪೋಲಿಸ ಠಾಣೆಯಲ್ಲಿ ನೀಡಿರುತ್ತಾರೆ ನಾನು ಸಹ ಅಲ್ಲೆಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ, ಆರೋಪಿತರಿಗೂ ಪ್ರಕರಣಕ್ಕೂ ಮತ್ತು ಮು. ಮಾ. ಗೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.